**ಕರ್ನಾಟಕ ಸರ್ಕಾರ**
**(ಪಿ.ಆರ್.ಪಿ.67)**

**ಹೇಳಿಕೆ ಹಾಳೆ**
**(ಆರ್.ಪಿ.ಸಂಖ್ಯೆ 57)**
**ನಮೂನೆ ಸಂಖ್ಯೆ 4**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 214/2021**

**ಫ್ರಾಸಾ- 10 ಚಾಸಾ- 13**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ದಿನೇಶ್ ಕುಮಾರ್ |
| ತಂದೆಯ ಹೆಸರುಃ | : | ಲೇಟ್ ಎಂ.ಎಸ್.ಮುದ್ದಪ್ಪ |
| ವಯಸ್ಸುಃ | : | 62ವರ್ಷ |
| ಉದ್ಯೋಗಃ | : | ನಿವೃತ್ತ ಪಿಎಸ್ಐ |
| ವಾಸ | : | ಹಾಸನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 13.08.2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಮೇ-2013 ರಿಂದ ಅಕ್ಟೊಬರ್-2019ರವರೆಗೆ ನಾನು ಶಾಂತಿಗ್ರಾಮ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ27.12.18ರಂದು ರಾತ್ರಿ 10.30ಗಂಟೆ ಸಮಯದಲ್ಲಿ ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ನಿಪಿ.1ರಂತೆ ಸ್ವೀಕರಿಸಿ ಠಾಣಾ ಮೊಕದ್ದಮೆ ಸಂ.211/18ರಂತೆ ಕೇಸು ದಾಖಲಿಸಿ ಪ್ರ.ವ.ವರದಯನ್ನು ನಿಪಿ.15ರಂತೆ ನ್ಯಾಯಾಲಯಕ್ಕೂ ಮತ್ತು ಮೇಲಾಧಿಕಾರಿಗಳಿಗೂ ನಿವೇದಿಸಿಕೊಂಡಿರುತ್ತೇನೆ. ನಿಪಿ.1ರಲ್ಲಿರುವ ರುಜುವನ್ನು ನಿಪಿ.1ಬಿ ಮತ್ತು ನಿಪಿ.15ರಲ್ಲಿರುವ ರುಜುವನ್ನು ನಿಪಿ.15ಎ ಎಂದು ಗುರುತಿಸಲಾಯಿತು. ಕಡತವನ್ನು ಮುಂದಿನ ತನಿಖೆಯ ಬಗ್ಗೆ ಚಾಸಾ-15ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ದಿಃ 27.12.18ರಂದು ನಾನು ಬೆಳಗ್ಗೆ 7.30ಗಂಟೆಯಿಂದ ರಾತ್ರಿ 11ಗಂಟೆಯವರೆಗೆ ಕರ್ತವ್ಯದಲ್ಲಿ ಇದ್ದೆನು. ನಾನು ಕರ್ತವ್ಯಕ್ಕೆ ಹಾಜರಾದಾಗ ಮತ್ತು ಕರ್ತವ್ಯದಿಂದ ಬಿಡುಗಡೆಯಾಗಿ ಹೋಗುವಾಗ ಚಲನವಲನವಹಿಗೆ ಮತ್ತು ಹಾಜರಾತಿ ಪುಸ್ತಕಕ್ಕೆ ಸಹಿ ಮಾಡಿರುತ್ತೇನೆ. ಆ ದಾಖಲೆಗಳ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದೂರುದಾರರ ಜೊತೆ ಬೇರೆ ಯಾರು ಬರಲಿಲ್ಲ. ಠಾಣೆಗೆ ಅವರು 10.30ಗಂಟೆಗೆ ಬಂದರು. ಅವರು ಘಟನೆ ನಡೆದಿರುವುದು 8.15ಗಂಟೆಗೆ ಎಂದು ತಿಳಿಸಿದರು. ಘಟನೆ ನಡೆದ ತಕ್ಷಣ ತಾವು ಮನೆಗೆ ಹೋಗಿ ಠಾಣೆಗೆ ಬಂದದ್ದೊ ಅಥವಾ ನೇರವಾಗಿ ಠಾಣೆಗೆ ಬಂದದ್ದೋ ಎಂದು ನನಗೆ ಹೇಳಿಲ್ಲ. ಅವರು ದೂರನ್ನು ಬರೆದು ತಂದಿದ್ದರು. ಅವರು ಬರುವಾಗಲೇ ಬರೆದು ತಂದಿದ್ದರು.

ಅವರು ದೂರು ಕೊಟ್ಟ ನಂತರ ಪ್ರ.ವ.ವರದಿಯನ್ನು ತಯಾರಿಸಲು ಅರ್ಧ ತಾಸು ಬೇಕಾಯಿತು. ಆರೋಪಿಯ ಯಾವುದೇ ತಪ್ಪು ಮಾಡದೇ ಇದ್ದರೂ ಕೂಡ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಪ್ರ.ವ.ವರದಿಯನ್ನು ದಾಖಿಸಿದ್ದೇನೆ ಎಂದರೆ ಸರಿಯಲ್ಲ. ಅಂಕಿ-ಅಂಶಗಳಿಗೋಸ್ಕರ ಸುಳ್ಳು ಕೇಸು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**